ಗೈರು ಹಾಜರಿಗೆ ಅನುಮತಿ

ಅಧ್ಯಕ್ಷರು:- ವಿಧಾನಸಭಾ ಸದಸ್ಯರಾದ ಶ್ರೀ ಎಂ.ಸಿ.ಮನಗೋಳಿಯವರು ದಿನಾಂಕ 4-7-1996ರಿಂದ 26-7-96ರವರೆಗೆ ಅನಾರೋಗ್ಯದ ನಿಮಿತ್ತ ಅಧಿವೇಶನಕ್ಕೆ ಗೈರು ಹಾಜರಿಯಾಗಲು ಅನುಮತಿ ಕೋರಿರುತ್ತಾರೆ.

ಮಾನ್ಯ ಸದಸ್ಯರು ಗೈರು ಹಾಜರಾಗಲು ಸಭೆಯುವ ಸಮ್ಮತಿಸುತ್ತದೆಯೇ?

ಸಭೆಯು ಒಪ್ಪಿಗೆ ಸೂಚಿಸಿತು.

ಅಧ್ಯಕ್ಷರು:- ಗೈರು ಹಾಜರಿಗೆ ಅನುಮತಿ ನೀಡಲಾಗಿದೆ. ವಿಧಾನಸಭಾ ಸದಸ್ಯರಾದ ಶ್ರೀ ವೀರಪ್ಪಮೊಯಿಲಿಯವರು ದಿನಾಂಕ:22-7-96ರಿಂದ ದಿನಾಂಕ:1-8-96ರವರೆಗೆ ವಿದೇಶ ಪ್ರವಾಸದ ನಿಮಿತ್ತ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೋರಿರುತ್ತಾರೆ. ಮಾನ್ಯ ಸದಸ್ಯರು ಗೈರು ಹಾಜರಾಗಲು ಸಭೆಯು ಸಮ್ಮತಿಸುತ್ತದೆಯೇ?

ಸಭೆಯು ಒಪ್ಪಿಗೆ ಸೂಚಿಸಿತು.

ಅಧ್ಯಕ್ಷರು:- ಗೈರು ಹಾಜರಿಗೆ ಅನುಮತಿಯನ್ನು ನೀಡಲಾಗಿದೆ.

ಅಧ್ಯಕ್ಷರು:- ಡಾ: ಎಂ.ಪಿ.ಕರ್ಕಿಯವರು ನಿನ್ನೆ ಬಾಕಿ ಬರಬೇಕಾದಂಥ ವಾರ್ಷಿಕ ವರದಿಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ವರದಿಯನ್ನು ಕೊಡಬೇಕಾದಂಥ ಇಲಾಖೆಗಳು ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಂದಾಯ ಇಲಾಖೆ, ಹಣಕಾಸು ಇಲಾಖೆ, ಕಾರ್ಮಿಕ ಇಲಾಖೆ, ಅಬಕಾರಿ ಇಲಾಖೆ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ತೋಟಗಾರಿಕೆ ಹಾಗೂ ಮೀನುಗಾರಿಕೆ ಇಲಾಖೆ ಇವುಗಳನ್ನು ಸಂಬಂಧಪಟ್ಟಂತಹ ಸಚಿವರು ಯಾರಿದ್ದಾರೆ ಅಥವಾ ಸಂಸದೀಯ ಸಚಿವರು ಈ ಕಡೆ ಗಮನಹರಿಸಿ ತಕ್ಷಣ ವಾರ್ಷಿಕ ವರದಿಗಳನ್ನು ಸದಸ್ಯರಿಗೆ ತಲುಪಿಸುವಂತಹ ವ್ಯವಸ್ಥೆಯನ್ನು ಮಾಡಬೇಕು.

ನಿಯಮ 351ರ ಮೇರೆಗೆ

ಅ) ವಿಷಯ:- ಕುಡಿಯುವ ನೀರಿನ ಕೊಳವೆ ಬಾವಿಗಳ ಕುರಿತು.

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಸಲುವಾಗಿ ವಿವಿಧ ಯೋಜನೆಗಳಡಿಯಲ್ಲಿ ಸರ್ಕಾರ ಸಾವಿರಾರು ಕೊಳವೆ ಬಾವಿಗಳನ್ನು ಕೊರೆಯಿಸುತ್ತಲಿದ್ದು ಅದರಲ್ಲಿ ಸಾಕಷ್ಟು ಸಂಖ್ಯೆಯುಳ್ಳ ಕೊಳವೆಬಾವಿಗಳು ಸಫಲವಾಗದೇ ಇದ್ದು ಅಂತಹ ಕೊಳವೆ ಬಾವಿಗಳಿಗೂ ಕೇಸಿಂಗ್ ಪೈಪು ಹಾಕಿ ಅದನ್ನು ಹಾಗೆಯೇ ಬಿಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುವುದಲ್ಲದೆ ಅನೇಕ ಬಾರಿ ಕೇಸಿಂಗ್ ಪೈಪು ತೆಗೆದು ಇಲಾಖೆಯವರು ಮಾರಿರುವಂತಹ ನಿದರ್ಶನಗಳು ತುಮಕೂರು ಜಿಲ್ಲೆಯಲ್ಲಿ ಬೆಳಕಿಗೆ ಬಂದಿವೆಯೆ? ಸರ್ಕಾರದ ಯಾವುದೇ ನಿರ್ದೇಶನವಿಲ್ಲದೇ

ಇರುವುದರಿಂದ ಅಧಿಕಾರಿಗಳು ಸಂದರ್ಭಗಳನ್ನು ಉಪಯೋಗಿಸಿಕೊಂಡು ದುರುಪಯೋಗ ಮಾಡುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಆಗುವ ನಷ್ಟವನ್ನು ತಪ್ಪಿಸಲು ಏನು ಕ್ರಮ ಕೈಗೊಂಡಿರುವಿರಿ ಎನ್ನುವ ವಿಷಯವನ್ನು ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ಕುಡಿಯವ ನೀರಿನ ಸಲುವಾಗಿ ಕೊರೆಯಿಸಿದ ಕೊಳವೆಬಾವಿಗಳು ನೀರು ಬಾರದೆ ವಿಫಲವಾದಲ್ಲಿ, ಅಂತಹ ಕೊಳವೆಬಾವಿಗಳಿಗೆ ಅಳವಡಿಸಿದ ಕೇಸಿಂಗ್ ಪೈಪುಗಳನ್ನು ತೆಗೆಯಲು ಸಾಧ್ಯವಾಗುವ ಎಲ್ಲಾ ಪ್ರಕರಣಗಳಲ್ಲೂ ಕೇಸಿಂಗ್ ಪೈಪುಗಳನ್ನು ಹೊರತೆಗೆಸಿ ಪುನಃ ಉಪಯೋಗಿಸಲಾಗುತ್ತಿದೆ.

ತಾಂತ್ರಿಕವಾಗಿ, ಕೆಲವು ವಿಫಲವಾದ ಕೊಳವೆಬಾವಿಗಳಿಂದ ಕೇಸಿಂಗ್ ಪೈಪುಗಳನ್ನು ಹೊರತೆಗೆಯಲು ಸಾಧ್ಯವಾಗುವುದಿಲ್ಲ. ಅಂತಹ ಕೇಸಿಂಗ್ ಪೈಪುಗಳನ್ನು ಹೊರತೆಗೆಯಬೇಕಾದರೆ ಅತ್ಯಂತ ಹೆಚ್ಚಿನ ಹಣ ಮತ್ತು ಸಮಯವು ವ್ಯರ್ಥವಾಗುತ್ತದೆ ಮತ್ತು ಅಂತಹ ಕೇಸಿಂಗ್ ಪೈಪುಗಳನ್ನು ಪುನಃ ಬಳಸಲು ಸೂಕ್ತವಾಗಿರುವುದಿಲ್ಲ.

ಕೇಸಿಂಗ್ ಪೈಪುಗಳನ್ನು ಹೊರತೆಗೆಯಲು ಸಾಧ್ಯವಿಲ್ಲದ ಸಂದರ್ಭಗಳಲ್ಲಿ ಆಯಾಯ ವಿಭಾಗದ ಕಾರ್ಯಪಾಲಕ ಅಭಿಯಂತರುಗಳು ಸ್ಥಳ ತನಿಖೆ ಮಾಡಿ ಅಂತಹ ಕೇಸಿಂಗ್ ಪೈಪುಗಳನ್ನು ಹಾಗೆಯೇ ಬಿಡುವ ಬಗ್ಗೆ ಅದರ ಬೆಲೆಯನ್ನು ಮನ್ನಾ ಮಾಡುವ ಬಗ್ಗೆ ಅಧೀಕ್ಷಕ ಅಭಿಯಂತರವರಿಂದ ದೃಢೀಕರಣ ಪಡೆದುಕೊಳ್ಳುತ್ತಾರೆ.

ಅದೂ ಅಲ್ಲದೆ, ಕೇಸಿಂಗ್ ಪೈಪುಗಳನ್ನು ಹೊರತೆಗೆಯಲು ಸಾಧ್ಯವಾಗುವಂತಹ ಪ್ರಕರಣಗಳಲ್ಲಿಯೂ ಸಹ ಕಾರ್ಯಪಾಲಕ ಅಭಿಯಂತರು ಸ್ಥಳ ತನಿಖೆ ನಡೆಸಿ, ಎಲ್ಲಾ ಕೇಸಿಂಗ್ ಪೈಪುಗಳನ್ನು ಹೊರತೆಗೆಯಲಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುತ್ತಾರೆ.

ಮೆಲ್ಕಂಡ ಈ ಎಲ್ಲಾ ವಿಷಯಗಳ ಬಗ್ಗೆ ಈಗಾಗಲೇ ಪ್ರಧಾನ ಇಂಜಿನಿಯರ್, ಸಾರ್ವಜನಿಕ ಆರೋಗ್ಯ ತಾಂತ್ರಿಕ ವಲಯ, ಬೆಂಗಳೂರು ಇವರು ಎಲ್ಲಾ ಇಂಜಿನಿಯರಿಂಗ್ ವಿಭಾಗಗಳಿಗೂ ಸುತ್ತೋಲೆಯನ್ನು ಹೊರಡಿಸಿರುತ್ತಾರೆ.

ತುಮಕೂರು ಜಿಲ್ಲೆಯಲ್ಲಿ ವಿಫಲವಾದ ಕೊಳವೆಬಾವಿಗಳಿಂದ ಕೇಸಿಂಗ್ ಪೈಪುಗಳನ್ನು ತೆಗೆದು ಮಾರಾಟ ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ದಕ್ಷಿಣ ಜಿಲ್ಲೆಯ ಮಾಣಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿಯನ್ನು ನೇಮಕ ಮಾಡುವ ಕುರಿತು.

ಶ್ರಿ ಡಿ.ವಿ.ಸದಾನಂದಗೌಡ (ಪುತ್ತೂರು):- ಮಾನ್ಯ ಅಧ್ಯಕ್ಷರೆ, ಬಂಟ್ವಾಳ ತಾಲ್ಲೂಕಿನ ಮುಖ್ಯ ಚಟುವಟಿಕೆಯ ಕೇಂದ್ರ ಎನಿಸಿರುವ ಮಾಣಿ ಪೆರ್ನೆ, ಬರಿಮಾರು ಕಡೇ ಶಿವಾಲಯ, ಪೆರಾಜೆ, ಅನಂತವಾಡಿ, ನೇರಳಕಟ್ಟೆ ಸೂರಿಕುವೇರು, ಗಡಿಯಾರ, ಕೆದಿರ,